# <u>ಕೃಷ್ಣ ಮಂತ್ರವ ಜಪಿಸೊ ಏ ಮನುಜ</u>

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 11.
2. **Note:** These lyrics are not available in other standard books that I referred.
3. **Note:** Singer has followed these wordings.

ರಾಗ: ಮಧ್ಯಮಾವತಿ ತಾಳ: ಆದಿ

ಕೃಷ್ಣ ಮಂತ್ರವ ಜಪಿಸೊ ಏ ಮನುಜ
ಕೃಷ್ಣ ಮಂತ್ರವ ಜಪಿಸೊ ॥ ಪ ॥

ವೈಷ್ಣವೋತ್ತಮನಾಗಿ ವಿಷ್ಣುವೆ ಗತಿಯೆಂದು ॥ ಅಪ ॥

ಜಪ-ತಪಾನುಷ್ಠಾನ ಸ್ನಾನಕ್ಕೆ ಈ ಮಂತ್ರ
ಕಪಟ ಬುದ್ಧಿಗಳನ್ನು ಕಟ್ಟುವ ಮಂತ್ರ
ಉಪದೇಶದಲಿ ಜ್ಞಾನಕೊಟ್ಟು ಸಲಹುವ ಮಂತ್ರ
ಸುಪವಿತ್ರ ಮಾಡಿ ಸ್ವರ್ಗ ಸೂರೆಗೊಡುವ ಮಂತ್ರ ॥ 1 ॥

ಸಕಲ ಸಾಧನೆಗಳಿಗೆ ಸಾರಭೂತದ ಮಂತ್ರ
ನಿಖಿಳ ದೇವರಿಗೆಲ್ಲ ಸಾಕ್ಷಿಭೂತದ ಮಂತ್ರ
ಭಕುತಿಯಲಿ ದ್ರೌಪದಿಯು ಭಜಿಸಿದ ಈ ಮಂತ್ರ
ಮುಕುತಿಯ ಕೊಟ್ಟು ಜನರ ಪೋಷಿಸುವ ಮಂತ್ರ ॥ 2 ॥

ಭಾವಿಸಲಣುರೇಣು ಪರಿಪೂರ್ಣವಾದ ಮಂತ್ರ
ಜೀವಗಳಿಗೆಲ್ಲ ಸಂಜೀವ ಮಂತ್ರ
ಪಾವನ ಮಾಡಿ ಪಾಲಿಪುದೀ ಮಂತ್ರ
ದೇವ ಪುರಂದರ ವಿಠಲ ಮಹಾ ಮಂತ್ರ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಹರಿಯ ಒಂದು ನಾಮವು ಎಲ್ಲ ಮಂತ್ರಗಳನ್ನೂ ಮೀರಿಸುವಂತಹದೆಂಬ ಮಾತನ್ನು ಇಲ್ಲಿ ದಾಸರು ವಿವರಿಸುತ್ತ, ಅಂತಹ ಮಂತ್ರವನ್ನು ಜಪಿಸುವುದಕ್ಕೆ ಜನರನ್ನು ಕುರಿತು ಉಪದೇಶಿಸಿದ್ದಾರೆ.

**ಸಾಕ್ಷಿಭೂತ** = ಅನುಭವದಿಂದ ಕಂಡುಕೊಂಡದ್ದು

**ರೇಣು** = ಅತಿ ಚಿಕ್ಕದಾದ ಕಣ

**ಸಂಜೀವ** = ಹೊಸ ಜೀವವನ್ನು ಕೊಡುವಂಥ (ಉದ್ಧರಿಸುವ)

**Classification:** Keerthane
**Ankita:** purandara vittala
**Location:** NA
**Category:** mahatmya jnana
**Sub-Category:** Krishna, mantra, nara, japa, tapa, snana, buddi, Vishnu, jnana, upadesha, Swarga, deva, draupadi, bhajane, mukti, jana, aNu, purna, jiva,
**Pravachana:** NA
**Explanation:** NA